ಪಿ **.**ಡಬ್ಲು **-1**

ದಿ**: 11-07-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.**

**ಮುಂದುವರಿದ ಪಾಟೀಸವಾಲು: ಶ್ರೀ ಬಿ ಎಸ್ ವಕೀಲರಿಂದ:**

2. ದಾವಾ ಜಮೀನಿನ ಪೂರ್ವಕ್ಕೆ ಹನುಮಂತ ಮತ್ತು ವೀರನಗೌಡ ಇಬ್ಬರ ಜಮೀನು ಇದೆ ಎಂದರೆ ಸರಿ. ಪಶ್ಚಿಮಕ್ಕೆ - ರಾಚಪ್ಪ ಮತ್ತು ನಿಮ್ಮದೆ ಇನ್ನೊಂದು ಜಮೀನು ಇದೆ ಎಂದರೆ ಸರಿ. ಉತ್ತರಕ್ಕೆ ವೆಂಕೋಬ ಜಾಲಗಿ ಇವರ ಜಮೀನುಎಂದರೆ ಸರಿ, ದಕ್ಷಿಣಕ್ಕೆ ರಸ್ತೆ ಇದೆ ಎಂದರೆ ಸರಿ. ನೀವು ಮೇಲೆ ಹೇಳಿದ ಚಕ್‌ಬಂದಿಯ ಜಮೀನಿನನ್ನು ದಾವಾ ವಾದ ಪತ್ರದಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ. ನೀವು ಬೇರೆ ಚಕ್‌ಬಂದಿಯನ್ನು ಬರೆಸಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ನಮೂದು ಮಾಡಿರುವ ಚಕ್‌ಬಂದಿ ಸುಳ್ಳು ಎಂದರೆ ಸರಿಯಲ್ಲ. ನೀವು ಬರೆಸಿರುವ ಚಕ್‌ಬಂದಿಯಲ್ಲಿ ದಾವಾ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ನೀವು ಹಾಜರು ಮಾಡಿರುವ ಹಾತ್ ನಕಾಶೆಯಲ್ಲಿ ಕೆನಾಲ್ ಎಲ್ಲಿ ಹಾದು ಹೋಗಿದೆ ಎಂದು ತೋರಿಸಿಲ್ಲ ಎಂದರೆ ಸರಿ.

3. ನನ್ನ ತಂದೆ ಛತ್ರಪ್ಪ ತೀರಿಕೊಂಡು ಸುಮಾರು 3 ವರ್ಷ ಆಗಿದೆ ನನ್ನ ತಂದೆಗೆ ಇಬ್ಬರು ಸಹೋದರರು ಅವರ ಹೆಸರು ವೆಂಕೋಬ ಮತ್ತು ರಂಗಪ್ಪ. ನನ್ನ ತಾತ ಛತ್ರಪ್ಪ ಅವರ ತಂದೆಯ ಹೆಸರು ಹನುಮಂತ. ನಿಮ್ಮ ತಂದೆಯ ತಾತನ ಹೆಸರು ಏನು ಗೊತ್ತಿದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

ನಿಮ್ಮ ತಂದೆಯ ತಾತನ ಹೆಸರು ಛತ್ರಪ್ಪ ಎಂದರೆ ಸರಿ. ನಿಮ್ಮ ತಂದೆಯ ತಾತನ ಹೆಸರು ಛತ್ರಪ್ಪ ಆಗಿದ್ದು ಅವರಿಗೆ ಮೂರು ಜನ ಮಕ್ಕಳು ಅವರ ಹೆಸರು ಯಲ್ಲಮ್ಮ, ಹನುಮಣ್ಣ, ಲಚಮವ್ವ ಎಂದರೆ ಸರಿ. ಲಚಮವ್ವ ಇವರ ಗಂಡನ ಹೆಸರು ಸಿದ್ದಪ್ಪ. ಪ್ರತಿವಾದಿ 1 ಮತ್ತು 2 ಸದರಿ ಲಚಮವ್ವ  ಮತ್ತು ಸಿದ್ದಪ್ಪ ಇವರ ಮಕ್ಕಳು ಎಂದರೆ ಸರಿ.  ದಾವಾ ಆಸ್ತಿಯ ಸರ್ವೆ ನಂಬರ್ 10 ಇದೆ.  ಅದರ ಒಟ್ಟು ವಿಸ್ತೀರ್ಣ 13 ಎಕರೆ 33 ಗುಂಟೆ ಇದೆ.   ದಾವಾ ಆಸ್ತಿ ಮೊದಲು ನಮ್ಮ ತಾತಾ ಹನುಮಣ್ಣನಿಗೆ ಸೇರಿದ್ದು, ನಿಮ್ಮ ತಾತನಿಗೂ ಅವರ ಹಿರಿಯರಿಂದ ಆಸ್ತಿ ಬಂದಿದೆ ಎಂದರೆ ಸರಿ. ವಾರಸನಾತೆಯಿಂದ ನಿಮ್ಮ ತಂದೆಯ ಹೆಸರಿಗೆ ಮುಟೇಶನ್ ಆಗಿದೆ ಎಂದರೆ ಸರಿ. ಸದರಿ ಸರ್ವೆ ನಂಬರ್ 10 ರಲ್ಲಿ 03 ಪಹಣಿಗಳಾಗಿವೆ. ರಾಚಪ್ಪನಿಗೆ 05-00 ಎಕರೆ, ಪಂಪಣ್ಣನಿಗೆ 03-00 ಎಕರೆ, ಹನುಮಣ್ಣ ಇವರಿಗೆ 05 ಎಕರೆ 28 ಗುಂಟೆ ಇದೆ.

4. ನನ್ನ ತಂದೆ ಹೆಸರಿನಲ್ಲಿದ್ದ 05 ಎಕರೆ 28 ಗುಂಟೆ ಜಮೀನು ಅವರು ಸತ್ತ ನಂತರ ನನ್ನ ಹೆಸರಿಗೆ ಪಹಣಿಯನ್ನು ಮಾಡಿಸಿಕೊಂಡಿದ್ದೇನೆ. ಸದರಿ ಸರ್ವೆ ನಂಬರ್ ನಲ್ಲಿ ಉಳಿದ 04 ಎಕರೆ 35 ಗುಂಟೆ ಜಮೀನು ರಾಚಪ್ಪ ಇವರ ಹೆಸರಿನಲ್ಲಿ ಇಲ್ಲ ಅಯ್ಯಪ್ಪ ತಂದೆ ಹನುಮಂತ ಇವರ ಹೆಸರಿನಲ್ಲಿದೆ ಎಂದರೆ ಸರಿ. 1ನೇ ಪ್ರತಿವಾದಿ ನಿಮ್ಮ ತಂದೆಗೆ ಅಳಿಯನಾಗಬೇಕು ಎಂದರೆ ಸರಿ. 1ನೇ ಪ್ರತಿವಾದಿಯ ತಾಯಿ ನಿಮ್ಮ ತಂದೆಯ ಕುಟುಂಬಕ್ಕೆ ಸೇರಿದವರಾಗಬೇಕಾಗಿದ್ದರಿಂದ ಊರಿನ ಹಿರಿಯರ ಸಮಕ್ಷಮ ಹನುಮಯ್ಯ ಅಬಕಾರಿ, ತಮ್ಮನಗೌಡ ಸಾ: ರಾಮದುರ್ಗ ಇವರ ಸಮಕ್ಷಮ ದಿನಾಂಕ: 23-04-1986 ರಂದು ನಿಮ್ಮ ತಂದೆ ಛತ್ರಪ್ಪ 1ನೆ ಪ್ರತಿವಾದಿ ಹೆಸರಿಗೆ ದಾನ ಪತ್ರ ಬರೆದುಕೊಟ್ಟಿದ್ದಾರೆಂದರೆ ಸರಿಯಲ್ಲ. ಆ ದಾನಪತ್ರವನ್ನು ಅಬ್ದುಲ್‌ಸಾಬ ರಾಮದುರ್ಗ ಎನ್ನುವವರು ಬರೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾನಪತ್ರದ ದಾಖಲೆಗೆ ಹನುಮಯ್ಯ ಅಬಕಾರಿ, ಮತ್ತು ತಮ್ಮನಗೌಡ ಸಾ: ರಾಮದುರ್ಗ ಇವರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಬಿಕ್‌ಕಲಂದಾರರಾಗಿ ಸದರಿ ದಾನಪತ್ರಕ್ಕೆ ಅಬ್ದುಲ್‌ಸಾಬ ರಾಮದುರ್ಗ ಇವರು ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾನಪತ್ರಕ್ಕೆ ನಿಮ್ಮ ತಂದೆ ಸಹಿಯನ್ನು ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಮ್ಮ ಚಿಕ್ಕಪ್ಪ ವೆಂಕೋಬ ಇವರು ಸಮ್ಮತಿದಾರರಾಗಿ ಸದರಿ ದಾನಪತ್ರಕ್ಕೆ ಸಹಿ ಮಾಡಿದ್ದಾರೆಂದರೆ ಸರಿಯಲ್ಲ. ಅವತ್ತಿನ ದಿನ ಸ್ಟಾಂಪ್

ಪೇಪರ್ ಬರೆದು ದಾನ ಪತ್ರಕ್ಕೆ ನಿಮ್ಮ ತಂದೆ ಸಹಿ ಮಾಡಿ ದಾವಾ ಆಸ್ತಿಯ ಕಬ್ಜೇಯನ್ನು 1ನೇ ಪ್ರತಿವಾದಿಗೆ ಕೊಟ್ಟಿದ್ದಾರೆಂದರೆ ಸರಿಯಲ್ಲ. ನಿಮ್ಮ ತಂದೆಯೇ ಸ್ವತ: ನನ್ನ ಅಳಿಯನಿಗೆ 03-00 ಎಕರೆ ಆಸ್ತಿ ಇರಲಿ ಎಂದು ಅರ್ಜಿಯನ್ನು ಕೊಟ್ಟು ಮುಟೇಶನ್ 05/1986-87 ರಂತೆ ಮುಟೇಶನ್ ಆದೇಶವಾಗಿದೆ ಎಂದರೆ ಸರಿಯಲ್ಲ. ನಿಮ್ಮ ತಂದೆಗೆ ಮುಟೇಶನ್ ಮಾಡಿರುವುದು ಸರಿಯಾಗಿದೆ ಎಂದು ಗೊತ್ತಿರುವುದರಿಂದ ಅವರು ಆ ಮುಟೇಶನ್ ನನ್ನು ಎಲ್ಲಿ ಪ್ರಶ್ನೆ ಮಾಡಿಲ್ಲ ಹಾಗೆ ಉಳಿದಿದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ತಾಯಿ ನಿಮ್ಮ ತಂದೆಯ ಕುಟುಂಬದವರಿಗೆ ಸೇರಿದವರಾಗಿದ್ದರಿಂದ ಅವರಿಗೆ ಭಾಗಾಂಶದ ಹಕ್ಕು ಇರುವುದರಿಂದ ಪ್ರೀತಿ ವಿಶ್ವಾಸದಿಂದ ಸದರಿ ಆಸ್ತಿ ಕೊಟ್ಟಿದ್ದಾರೆಂದರೆ ಸರಿಯಲ್ಲ. ದಾನ ಪತ್ರ ಆದಾಗಿನಿಂದಲೂ 1ನೇ ಪ್ರತಿವಾದಿಯೇ ಕಬ್ಜಾದಾರರು ಮತ್ತು ಮಾಲೀಕರು ಆಗಿದ್ದಾರೆಂದರೆ ಸರಿಯಲ್ಲ. ನಂತರ 2013 ನೇ ಸಾಲಿನಲ್ಲಿ 1ನೇ ಪ್ರತಿವಾದಿಯ ಮಗನಾದ2ನೇ ಪ್ರತಿವಾದಿ ಹೆಸರಿಗೆ ಮುಟೇಶ ನ್

ಆಗಿದೆ ಎಂದರೆ ಸರಿಯಲ್ಲ. ಈಗ 2ನೇ ಪ್ರತಿವಾದಿಯೇ ದಾವಾ ಆಸ್ತಿಯ ಮಾಲೀಕ ಕಬ್ಜಾದಾರನಾಗಿದ್ದಾನೆಂದರೆ ಸರಿಯಲ್ಲ ನಾವೆ ಮಾಲೀಕರು ಮತ್ತು ಕಬ್ಜಾದಾರನಾಗಿದ್ದೇವೆಂದು ನುಡಿಯುತ್ತಾರೆ.

5. ನೀವು 25 ಗುಂಟೆ ಕೆನಾಲ್ ಗೆ ಹೋಗಿರುವ ಜಾಗವನ್ನು ವಾದ ಪತ್ರದಲ್ಲಿ ಹೇಳಿ ಬರೆಸಿಲ್ಲ ಸಾಕ್ಷಿಯು ಹೌದು ಅದನ್ನು ನಾನು ಖರೀದಿ ಮಾಡಿದ್ದೇನೆ ಅದ್ದರಿಂದ ವಕೀಲರಿಗೆ ಹೇಳಿ ಬರೆಸಿಲ್ಲ ಎನ್ನುತ್ತಾರೆ. ನೀವು ನಿಮ್ಮ ಮುಖ್ಯ ವಿಚಾರಣೆಯ ಪ್ಯಾರಾ ನಂಬರ್ 7 ರಲ್ಲಿ ಪ್ರತಿವಾದಿಯರು ಕೆಬಿಜೆಎನ್‌ಎಲ್ ಅಧಿಕಾರಿಗಳಿಂದ ಪರಿಹಾರ ಹಣವನ್ನು ಪಡೆದಿದ್ದಾರೆ ಎಂದು ನೀವೆ ಹೇಳಿ ಬರೆಸಿದ್ದೀರಿ ಎಂದರೆ ಸಾಕ್ಷಿಯು ಬರೆಸಿಲ್ಲ ಎನ್ನುತ್ತಾರೆ. ಈ ರೀತಿ ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಮತ್ತು ವಾದ ಪತ್ರದಲ್ಲಿ ಪ್ರತಿವಾದಿಯರು ಪರಿಹಾರ ಹಣ ಪಡೆದಿದ್ದಾರೆ ಎಂದು ಬರೆಸಿದ್ದರೂ ಈಗ ಬರೆಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಯ ಹೆಸರಿಗೆ ಇರುವ ಮುಟೇಶನ್ ಗಳನ್ನು ನೀವು ಕಂದಾಯ ಅಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆಯ

ಹೆಸರಿನಲ್ಲಿರುವುದರಿಂದ  ನನಗೆ ಗೊತ್ತಿಲ್ಲ ಎನ್ನುತ್ತಾರೆ. ಗೊತ್ತಾದ ಮೇಲೆ ನೀವು ಕಂದಾಯ ಅಧಿಕಾರಿಗಳ ಮೇಲೆ ಪ್ರಶ್ನಿ ಮಾಡಿಲ್ಲ ಎಂದರೆ ಸಾಕ್ಷಿಯು ಹೌದು ಮಾಡಿಲ್ಲ ಎನ್ನುತ್ತಾರೆ. ನಿಮ್ಮ ತಂದೆಯು ಇರುವ ಕಾಲಕ್ಕೆ ಅವರು ದಾವಾ ಆಸ್ತಿಯಲ್ಲಿ ಯಾವತ್ತು ಮಾಲೀಕರು ಕಬ್ಜಾದಾರರು ಇರಲಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಂದೆ ಸತ್ತನಂತರ ನೀವಾಗಲೀ ಎಂದು ದಾವಾ ಆಸ್ತಿಯಲ್ಲಿ ಮಾಲೀಕರು ಮತ್ತು ಕಬ್ಜಾದಾರರು ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ನೀವು ಸಂಬಂಧ ಇಲ್ಲದೆ ಇದ್ದರೂ ಅವರು ತಪ್ಪು ಮುಟೇಶನ್ ಮಾಡಿಕೊಂಡಿದ್ದಾರೆ ಎಂದು ಸುಳ್ಳು ದಾವೆ ಸಲ್ಲಿಸಿದ್ದಿರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಮತ್ತು ವಾದ ಪತ್ರದಲ್ಲಿ ಬರೆಸಿದ ವಿಷಯಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

ಪಿ .ಡಬ್ಲು -1

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ